kotak
Kotak Mahindra Bank
ಕೋಟಕ್ ಮಹೀಂದ್ರ ಬ್ಯಾಂಕ್

# ಸಾಮಾನ್ಯ ಜನರಿಗೆ ಬ್ಯಾಂಕಿಂಗ್

## 01

? ಬ್ಯಾಂಕ್ ಖಾತೆ ತೆರೆಯುವುದು ಹೇಗೆ ?

ತುಂಬಾ ಸುಲಭ. ಬ್ಯಾಂಕ್ ಖಾತೆ ತೆರೆಯಲು ಇತ್ತೀಚಿನ ಫೋಟೋದೊಂದಿಗೆ ನಿಮ್ಮ ಗುರುತಿನ ಮತ್ತು ವಿಳಾಸದ 'ಪುರಾವೆ' ನೀಡಬಹುದು.

## 02

? ಗುರುತಿನ ಪುರಾವೆ ಮತ್ತು ವಿಳಾಸದ ಪುರಾವೆಗಾಗಿ ನಾನು ಯಾವ ದಾಖಲೆಪತ್ರ ನೀಡಬೇಕು ?

ಪಾಸ್‌ಪೋರ್ಟ್, ಡ್ರೈವಿಂಗ್ ಲೈಸೆನ್ಸ್, ಮತದಾರರ ಗುರುತಿನ ಚೀಟಿ, UIDAI ನೀಡಿರುವ ಆಧಾರ್ ಕಾರ್ಡ್, ನರೇಗಾ ಕಾರ್ಡ್‌ನಂತಹ ಯಾವುದೇ ದಾಖಲೆಯನ್ನು ಗುರುತಿನ ಪುರಾವೆಯಾಗಿ ನೀಡಬಹುದು. ಈ ದಾಖಲೆಪತ್ರದಲ್ಲಿ ನಿಮ್ಮ ವಿಳಾಸವೂ ಇದ್ದರೆ ಅದನ್ನು ನಿಮ್ಮ ಗುರುತು ಹಾಗೂ ವಿಳಾಸದ ಪುರಾವೆಯಾಗಿ ನೀಡಬಹುದು.




## 03

? ನಾನು ನವ ದೆಹಲಿಯಲ್ಲಿದ್ದು ನನ್ನ ವಿಳಾಸ ಪುರಾವೆ ಕರ್ನಾಟಕದ್ದಾಗಿದ್ದರೆ ನಾನು ನವದೆಹಲಿಯಲ್ಲಿ ಖಾತೆ ತೆರೆಯಬಹುದೇ ?

ಖಂಡಿತ ತೆರೆಯಬಹುದು. ಕರ್ನಾಟಕದ ವಿಳಾಸ ಪುರಾವೆಯೊಂದಿಗೆ ಸಂಪರ್ಕ ಪುರಾವೆಯಾಗಿ ನವ ದೆಹಲಿಯ ವಿಳಾಸ ನೀಡಿದರಾಯ್ತು.

## 04

? ಬ್ಯಾಂಕ್‌ಗಳಿಗೆ ಗುರುತಿನ ಮತ್ತು ವಿಳಾಸದ ಪುರಾವೆ ಏಕೆ ಬೇಕು ?

ಬ್ಯಾಂಕುಗಳು ತಮ್ಮ ಗ್ರಾಹಕರನ್ನು ಸರಿಯಾಗಿ ತಿಳಿದುಕೊಳ್ಳಲು ಕೆವೈಸಿ (KYC) ಅಂದರೆ ನಿಮ್ಮ ಗ್ರಾಹಕರನ್ನು ತಿಳಿದುಕೊಳ್ಳಿ ಎಂಬುದರ ಭಾಗವಾಗಿ ಬ್ಯಾಂಕ್‌ಗಳಿಗೆ ನಿಮ್ಮ ಗುರುತಿನ ಮತ್ತು ವಿಳಾಸದ ಪುರಾವೆ ಬೇಕಾಗುತ್ತದೆ.

## 05

? ನನ್ನ ಗುರುತಿನ ಪುರಾವೆ ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳಿಲ್ಲದಿದ್ದರೆ ನಾನು ಬ್ಯಾಂಕ್ ಖಾತೆ ತೆರೆಯಲು ಸಾಧ್ಯವಿಲ್ಲವೇ ?

ಖಂಡಿತ ಸಾಧ್ಯವಿದೆ. ನಿಮ್ಮ ಇತ್ತೀಚಿನ ಭಾವ ಚಿತ್ರ ಸಲ್ಲಿಸುವುದರೊಂದಿಗೆ ಬ್ಯಾಂಕ್ ಅಧಿಕಾರಿಯ ಮುಂದೆ ನಿಮ್ಮ ಸಹಿ ಅಥವಾ ನಿಮ್ಮ ಹೆಬ್ಬೆರಳಿನ ಗುರುತು ನೀಡುವ ಮೂಲಕ ಸಣ್ಣ ಖಾತೆ ಅನ್ನುವ ನಿಮ್ಮ ಬ್ಯಾಂಕ್ ಖಾತೆ ತೆರೆಯಬಹುದು. ಆದರೆ ಈ ಖಾತೆಗಳಲ್ಲಿ ಇರುವ ಶಿಲ್ಕು (ಬ್ಯಾಲೆನ್ಸ್)ಯಾವುದೇ ಸಮಯದಲ್ಲಿ ರೂ. 50,00/ಕ್ಕಿಂತ ಮೀರಿರಬಾರದು ಮತ್ತು ಒಂದು ವರ್ಷದಲ್ಲಿ ಒಟ್ಟು ಕ್ರೆಡಿಟ್ ಬ್ಯಾಲೆನ್ಸ್ ರೂ. 1,00,000/ ಮೀರಲೇಬಾರದು ಅಲ್ಲದೆ ತಿಂಗಳಿಗೆ ರೂ. 10,000/ಕ್ಕಿಂತ ಹೆಚ್ಚು ಹಣ ಹಿಂಪಡೆಯುವಂತಿಲ್ಲ.

## 06

? ನನ್ನ ಖಾತೆ ಯಾವುದೇ ಮಿತಿಗಳನ್ನು ಹೊಂದಲು ನಾನು ಬಯಸುವುದಿಲ್ಲ. ಆದರೆ ನನ್ನ ಬಳಿ ಯಾವುದೇ ಗುರುತಿನ ಪುರಾವೆಯ ದಾಖಲೆಗಳಿಲ್ಲ. ಆದರೂ ನಾನು ಬ್ಯಾಂಕ್ ಖಾತೆ ತೆರೆಯಲು ಅರ್ಹನಾಗಿದ್ದೇನೆಯೇ ?

ಹೌದು, ಈ ಕೆಳಗಿನ ಯಾವುದೇ ದಾಖಲೆಯ ಪ್ರತಿಯನ್ನು ಸಲ್ಲಿಸಿದ ಬಳಿಕ ನಿಮ್ಮನ್ನು ಕಡಿಮೆ ಅಪಾಯದ ಗ್ರಾಹಕ ಎಂದು ಬ್ಯಾಂಕ್ ನಿರ್ಧರಿಸಿದರೆ, ಆದರಡಿ ನೀವು ಬ್ಯಾಂಕ್ ಖಾತೆ ತೆರೆಯಬಹುದು:

(i) ಕೇಂದ್ರ/ರಾಜ್ಯ ಸರಕಾರದ ಇಲಾಖೆಗಳು, ಶಾಸನಬದ್ಧ/ನಿಯಂತ್ರಣ ಪ್ರಾಧಿಕಾರಗಳು ಸಾರ್ವಜನಿಕ ವಲಯದ ಉದ್ಯಮಗಳು, ವರ್ಗೀಕೃತ (ಅನುಸೂಚಿತ)ವಾಣಿಜ್ಯ ಬ್ಯಾಂಕುಗಳು ಮತ್ತು ಸಾರ್ವಜನಿಕ ಹಣಕಾಸು ಸಂಸ್ಥೆಗಳು ನೀಡಿರಬಹುದಾದ ನಿಮ್ಮ ಭಾವಚಿತ್ರವಿರುವ ಗುರುತು ಪತ್ರ ಅಥವಾ

(ii) ನಿಮ್ಮ ದೃಢೀಕೃತ ಭಾವಚಿತ್ರದೊಂದಿಗೆ ಗೆಜೆಟೆಡ್ ಅಧಿಕಾರಿಯು ನೀಡಿರುವ ಪತ್ರ.

KMBL / Aug 2023 / V 1.0